ಕನ್ನಡ ಪೋಸ್ಟ್
KANNADA POST
ಇದು ಸುದ್ದಿ ವಿಳಾಸ
ಸಂಪಾದಕ : ಮಂಜು ಬನವಾಸೆ
ಕನ್ನಡ ದಿನಪತ್ರಿಕೆ
ಹಾಸನ  E-mail : kannadapostnews@gmail.com  / ಕನ್ನಡ post  Price: ₹1
Vol.No.02 | Issue. 78 | Pages. 2 | Date: 22-02-2026, SUNDAY  RNI NO: KARKAN/2024/89601  Kannada Daily
ಸಂಪುಟ : 02 - ಸಂಚಿಕೆ : 78 - ಪುಟಗಳು : 2  22-02-2026  ಭಾನುವಾರ  Ph: 8762954248  ದರ : ₹1

# ಜನರು ಸಮಸ್ಯೆ ಹೇಳಿಕೊಳ್ಳುವುದೇ ಕೆಲಸವಾಗಬಾರದು

## ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಸೂಚನೆ | ಜನ ಸಂಪರ್ಕ ಸಭೆಯಲ್ಲಿ 493 ಅರ್ಜಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಈಗಾಗಲೇ ಜನಸ್ಪಂದನಾ ಸಭೆಯಲ್ಲಿ ಅರ್ಜಿ ಸಲ್ಲಿಸಿದ ಅರ್ಜಿಗಳು ಪುನರಾವರ್ತನೆಯಾದರೆ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು. ಸಾರ್ವಜನಿಕರು ಕೆಲಸ ಕಾರ್ಯ ಬಿಟ್ಟು ಅರ್ಜಿ ಹಿಡಿದುಕೊಂಡು ಬರುವುದೇ ಕೆಲಸವಾಗಬಾರದು ಎಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಶನಿವಾರ ಏರ್ಪಡಿಸಲಾಗಿದ್ದ ಜನ ಸಂಪರ್ಕ ಸಭೆಯಲ್ಲಿ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿ ಮಾತನಾಡಿದರು.

ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಹಾಸನ, ಚನ್ನರಾಯಪಟ್ಟಣ, ಸಕಲೇಶಪುರದಲ್ಲಿ ಜನ ಸ್ಪಂದನ ಸಭೆಯಲ್ಲಿ ಸಲ್ಲಿಸಿರುವ ಅರ್ಜಿಗಳು ಬಾಕಿ ಇದ್ದು ಕೂಡಲೇ ಅರ್ಜಿ ವಿಲೇವಾರಿ ಮಾಡಬೇಕು ಎಂದು ತಿಳಿಸಿದರು.

ಜನಸ್ಪಂದನ ಸಭೆಯಲ್ಲಿ ಸಾರ್ವಜನಿಕರು 493 ಅರ್ಜಿಗಳನ್ನು ಸ್ವೀಕರಿಸಿ ಸಾಧ್ಯವಾಗುವ ಸಮಸ್ಯೆಗಳಿಗೆ ಸ್ಥಳದಲ್ಲಿಯೇ ಪರಿಹಾರ ನೀಡಲಾಯಿತು, ಕೆಲವು ಅರ್ಜಿಗಳ ಸಮಸ್ಯೆಯನ್ನು ಬಗೆಹರಿಸಲು ಅಧಿಕಾರಿಗಳಿಗೆ ಸೂಚಿಸಿದರು.

ದುರಸ್ತಿ, ಪೋಡಿ ಹಾಗೂ ಪೌತಿ ಖಾತೆ, ಜಮೀನಿಗಳಿಗೆ ತೆರಳಲು ರಸ್ತೆಗಳು,ಸರ್ಕಾರಿ ಕೆರೆ ಹಾಗೂ ರಾಜ ಕಾಲುವೆ ಒತ್ತುವರಿ ವಿಷಯವಾಗಿ ಸಾರ್ವಜನಿಕರಿಂದ ಜನ ಸ್ಪಂದನ ಸಭೆಯಲ್ಲಿ ಹೆಚ್ಚಿನ ಅರ್ಜಿ ಸಲ್ಲಿಕೆಯಾಗಿವೆ.

ಜನಸ್ಪಂದನ ಸಭೆ ನಂತರ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಏಪ್ರಿಲ್ ನಲ್ಲಿ ಜನ ಗಣತಿ ಪ್ರಾರಂಭ ವಾಗುತ್ತಿದ್ದು, ಜನ ಗಣತಿಯೂ 2 ಹಂತದಲ್ಲಿ ನಡೆಯಲಿದೆ ಮೊದಲ ಹಂತದಲ್ಲಿ ಮನೆ ಮನೆಗಳ ಸಮೀಕ್ಷೆ ಏ. 16 ರಿಂದ ಮೇ 16 ರವರಿಗೆ ನಡೆಯಲಿದೆ. ಎಲ್ಲಾ ಅಧಿಕಾರಿಗಳು ಸಮೀಕ್ಷೆಯಲ್ಲಿ ಪಾಲ್ಗೊಳ್ಳಲು ಸಿದ್ಧವಾಗಿರಬೇಕು ಎಂದರು.

ಫೆ.25 ರಂದು ಜಿಲ್ಲಾ ಉಸ್ತುವಾರಿ ಸಚಿವ ಅಧ್ಯಕ್ಷತೆಯಲ್ಲಿ ಕೆ.ಡಿ.ಪಿ ಸಭೆ ನಡೆಯಲಿದ್ದು, ಹಿಂದಿನ ಕೆ.ಡಿ.ಪಿ ಸಭೆಯಲ್ಲಿ ಚರ್ಚೆಯಾದ ವಿಷಯಗಳ ಕುರಿತು ಅನುಪಾಲನಾ ವರದಿಯನ್ನು ಸಿದ್ಧಪಡಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಬೇಸಿಗೆ ಆರಂಭವಾಗುತ್ತಿರುವುದರಿಂದ ಜಿಲ್ಲೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ಆಗದಂತೆ ಸಂಬಂಧಪಟ್ಟ ಅಧಿಕಾರಿಗಳು ಸಿದ್ಧತೆಗಳನ್ನು




> ಬೇಲೂರು ತಾಲ್ಲೂಕಿನಲ್ಲಿ ಅಕ್ರಮ ಗಣಿಗಾರಿಕೆ ಪ್ರಕರಣಗಳು ಹೆಚ್ಚುತ್ತಿವೆ. ಯಾರೋ ರಸ್ತೆಗೆ ಕಾಂಪೌಂಡ್ ಹಾಕಿ ಗಣಿಗಾರಿಕೆ ಮಾಡುತ್ತಿದ್ದಾರೆಂಬ ದೂರುಗಳು ಕೇಳಿಬಂದಿವೆ. ಪರಿಸ್ಥಿತಿ ಇಷ್ಟೊಂದು ಬಿಗಡಾಯಿಸಿದರೂ ಅಧಿಕಾರಿಗಳು, ಇಲಾಖೆ ಏಕೆ ಇರಬೇಕು.
>
> **- ಕೆ.ಎಸ್.ಲತಾಕುಮಾರಿ, ಜಿಲ್ಲಾಧಿಕಾರಿ**

ಮಾಡಿಕೊಳ್ಳಬೇಕು.

ಪ್ರಾಣಿ-ಪಕ್ಷಿ ಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಪಶುಪಾಲನಾ ಇಲಾಖೆಯವರು ಮಾಡಬೇಕು ಹಾಗೂ ಜಾನುವಾರುಗಳಿಗೆ ಮೇವಿನ ಕೊರತೆಯದಂತೆ ಪರಿಶೀಲಿಸಿ ಮುಂಜಾಗ್ರತಾ ಕ್ರಮ ವಹಿಸಲು ಸೂಚಿಸಿದರು.

ಮಾರ್ಚ್ ಮಾಹೆಯಲ್ಲಿ ಉದ್ಯೋಗ ಮೇಳವನ್ನು ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ವಿವಿಧ ಇಲಾಖೆಗಳ ಸಹಕಾರದೊಂದಿಗೆ ಆಯೋಜನೆ ಮಾಡಲಾಗುತ್ತಿದ್ದು, ಇದರಲ್ಲಿ ಎಲ್ಲಾ ಇಲಾಖೆಯ ಅಧಿಕಾರಿಗೂ ಪಾಲ್ಗೊಳ್ಳಬೇಕು ಹಾಗೂ ಹೆಚ್ಚಿನ ಪ್ರಚಾರ ನೀಡಬೇಕು ಎಂದರು.

ಉದ್ಯೋಗ ಮೇಳದಲ್ಲಿ ಎಸ್.ಎಸ್.ಎಲ್.ಸಿ, ಪಿಯುಸಿ, ಪದವಿ, ಐ.ಟಿ.ಐ, ಡಿಪ್ಲೊಮಾ, ಇಂಜಿನಿಯರಿಂಗ್ ವಿದ್ಯಾರ್ಥಿಗಳು ಭಾಗವಹಿಸಬಹುದು ಜಿಲ್ಲೆಯ ಮಕ್ಕಳು ಇದರ ಸದುಪಯೋಗ ಪಡೆದುಕೊಳ್ಳಲು ಅಗತ್ಯ ಸಿದ್ಧತೆ

### ಹುಡಾ ನಿವೇಶನ ನೀಡಲು ಹಿಂದೇಟು

ಹಾಸನದ ಬೀರನಹಳ್ಳಿ ಕೆರೆ ವ್ಯಾಪ್ತಿಯಲ್ಲಿ ವಾಸವಿದ್ದ 73 ಕುಟುಂಬಗಳನ್ನು ರಾಜಕೀಯ ದ್ವೇಷಕ್ಕಾಗಿ ಯಾವ ಸೂಚನೆ ನೀಡದೆ 2007ರಲ್ಲಿ ಮನೆಗಳಿಂದ ಹೊರಹಾಕಿದರು. ಸಂತ್ರಸ್ತ ಕುಟುಂಬಗಳಿಗೆ ಎಸ್.ಎಂ.ಕೃಷ್ಣ ಬಡಾವಣೆಯಲ್ಲಿ ಮನೆ ನಿರ್ಮಿಸಿಕೊಡುವುದಾಗಿ ಭರವಸೆ ಮೂಡಿಸಿದ್ದರು ಮಾತ್ರವಲ್ಲದೆ ನಿವೇಶನ ಗುರುತಿಸಿದ್ದರು. ಸಂತ್ರಸ್ತರಿಗೆ ಹಕ್ಕುಪತ್ರ ನೀಡಲಾಗಿದೆಯಾದರೂ ಅದರಿಂದ ಯಾವ ಪ್ರಯೋಜನವೂ ಇಲ್ಲ. ನಮಗೆ ನಿಗದಿಯಾಗಿದ್ದ ಜಾಗ ಹುಡಾಗೆ ಸೇರಿದ್ದು, ಉಚಿತವಾಗಿ ನಿವೇಶನ ನೀಡಲು ಸಾಧ್ಯವಿಲ್ಲವೆಂದು ಸಬೂಬು ಹೇಳಿ ಆ ಜಾಗದಲ್ಲಿ ಪಾರ್ಕ್ ನಿರ್ಮಿಸಿದ್ದಾರೆ. ಹೀಗಾಗಿ ನೂರಾರು ಕುಟುಂಬಗಳು ಇಂದಿಗೂ ಗುಡಿಸಲುಗಳಲ್ಲೇ ವಾಸಿಸುವಂತಾಗಿದೆಯೆಂದು ಅಳಲು ತೋಡಿಕೊಂಡರು.



ಮಾಡಿಕೊಳ್ಳಬೇಕು ಎಂದು ತಿಳಿಸಿದರು.

### ಭೂ ಒತ್ತುವರಿ ಅರ್ಜಿ ಅಧಿಕ

ಅಕ್ರಮ ಗಣಿಗಾರಿಕೆ ಹಾಗು ಭೂ ಒತ್ತುವರಿ ಸಂಬಂಧ ದೂರುಗಳು ಹೆಚ್ಚಿವೆ. ಹಲವು ತಿಂಗಳಿಂದ ಸಮಸ್ಯೆ ಜೀವಂತವಾಗಿಯೇ ಇವೆ. ಅಧಿಕಾರಿಗಳು ಏನು ಮಾಡುತ್ತಿದ್ದೀರಿ. ಪ್ರತಿ ಸಭೆಯಲ್ಲೂ ಅದೇ ವಿಷಯ ಚರ್ಚೆ ಮಾಡುವುದು ಸರಿಯಾದ ನಡೆಯಲ್ಲವೆಂದು ಸ್ಪಷ್ಟಪಡಿಸಿದರು.

ಅರಸೀಕೆರೆ ತಾಲೂಕು ಹಾರನಹಳ್ಳಿ ಗ್ರಾಮದ ಹೆಚ್.ಎನ್.ರಾಮಯ್ಯ ಅವರು ತಮಗೆ 97 ವರ್ಷವಾದರೂ ಈ ತನಕ ಪಿಂಚಣಿ ಬರುತ್ತಿಲ್ಲ. ಜಮೀನು ಇದೆಯಾದರೂ ನಿರೀಕ್ಷಿತ ಆದಾಯ ಬರುತ್ತಿಲ್ಲ. ಇಳಿ ವಯಸ್ಸಿ ನಲ್ಲಿ ವೈದ್ಯಕೀಯ ಖರ್ಚಿಗೂ ಪರದಾಡುವಂತಾಗಿದೆ. ಕೃಷಿ ಇಲಾಖೆಯಿಂದ ನೀಡುವ ಕಿಸಾನ್ ಪಿಂಚಣಿಗೆ ಅರ್ಜಿ ಸಲ್ಲಿಸಿದರೂ ಅಧಿಕಾರಿಗಳು ತಿರಸ್ಕರಿಸಿದ್ದಾರೆ. ಕನಿಷ್ಟ ಪಿಂಚಣಿ ಬರುವಂತೆ ಮಾಡಿಕೊಡಬೇಕೆಂದು ಜಿಲ್ಲಾಧಿಕಾರಿ ಅವರನ್ನು ಕೈಮುಗಿದು ಬೇಡಿಕೊಂಡರು.

### ಪಿಡಿಓ ವಿರುದ್ಧ ಅಸಮಾಧಾನ

ಬೇಲೂರು ತಾಲ್ಲೂಕಿನ ಟಿ.ಎಂ.ರಾಜಶೇಖರ್ ಹಾಗೂ ಇತರರು ಮನವಿ ಸಲ್ಲಿಸಿ, ಸರ್ಕಾರಿ ಜಾಗದಲ್ಲಿ ಸಾರ್ವಜನಿಕ ರಸ್ತೆಗೆ ಅನುಕೂಲ ಮಾಡಿಕೊಡಬೇಕೆಂದು ಜಿಲ್ಲಾಧಿಕಾರಿ ಆದೇಶವಿದ್ದರೂ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ನಿಮ ಆದೇಶವನ್ನು ಧಿಕ್ಕರಿಸಿ ನಮ ಅರ್ಜಿ ತಿರಸ್ಕರಿಸಿದ್ದಾರೆಂದು ಗಂಭೀರ ಆರೋಪ ಮಾಡಿದರು.

ಅರೇಹಳ್ಳಿ ಹೋಬಳಿ ನಾಗೇನಹಳ್ಳಿ, ಮೆಣಸಿನ ಮನೆ ಮತ್ತು ಹಂಜಿಹಳ್ಳಿ ಗ್ರಾಮಗಳಿಗೆ ತಿರುಗಾಡುವ ಉದ್ದೇಶಕ್ಕಾಗಿ ಸರ್ವೆ ನಂ. 35ರ ಸರ್ಕಾರಿ ಜಾಗವನ್ನು 2011ರಲ್ಲಿ ಜಿಲ್ಲಾಡಳಿತ ಕಾಯ್ದಿರಿಸಿದೆ. 2021ರ ವರೆಗೆ ಗ್ರಾಮಸ್ಥರು ಆ ರಸ್ತೆಯಲ್ಲಿ ಓಡಾಡಿಕೊಂಡಿದ್ದರು. ಆದರೆ ಆ ಬಳಿಕ ತಂತಿ ಬೇಲಿಯಿಂದ ರಸ್ತೆ ಬಂದ್ ಮಾಡಿ ಕಾಫಿ ತೋಟ ಮಾಡಿಕೊಂಡಿದ್ದಾರೆ. 2025ರಲ್ಲಿ ಬೇಲೂರು ತಹಶೀಲ್ದಾರ್ ಸಹ ದಾರಿ ಖುಲ್ಲಾ ಮಾಡಿಸಿದ್ದರು. 2026ರ ಜ. 3ರಂದು ತಹಶೀಲ್ದಾರ್, ಉಪ ತಹಶೀಲ್ದಾರ್, ತಾಲ್ಲೂಕು ಸರ್ವೆ ಅಧಿಕಾರಿಗಳು ಸಮೀಕ್ಷೆ ನಡೆಸಿ ಸರ್ವೆ ಆಧಾರಿತ ಪತ್ರವನ್ನು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗೆ ನೀಡಿದ್ದರು. ಆದರೆ ಅದನ್ನು ಸ್ವೀಕರಿಸಲು ಅಧಿಕಾರಿ ನಿರಾಕರಿಸಿದ್ದಾರೆ. ಜಿಲ್ಲಾಡಳಿತ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ನಮಗೆ ಜಾಗ ಬಿಡಿಸಿಕೊಡಬೇಕೆಂದು ಒತ್ತಾಯಿಸಿದರು.

ಅಪರ ಜಿಲ್ಲಾಧಿಕಾರಿ ಜಗದೀಶ್ ಗಂಗಣ್ಣವರ್, ತಹಶೀಲ್ದಾರ್ ಗಳಾದ ಶ್ರೀಧರ್ ಕಂಕಣವಾಡಿ, ಗೀತಾ, ಶಿವಶಂಕರಪ್ಪ, ಭೂದಾಖಲೆಗಳ ಉಪನಿರ್ದೇಶಕಿ ಹೇಮಲತಾ, ಪೌರಾಯುಕ್ತ ಆರ್.ಕೃಷ್ಣಮೂರ್ತಿ, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ದೂದ್‌ಪೀರ್ ಮತ್ತಿತರರಿದ್ದರು.

# ತೋಟಿ ಏತ ನೀರಾವರಿ ಯೋಜನೆ ಕಾಮಗಾರಿ ಶೀಘ್ರ ಪೂರ್ಣ: ಭರವಸೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ನುಗ್ಗೇಹಳ್ಳಿ: ನುಗ್ಗೇಹಳ್ಳಿ-ಹಿರೀಸಾವೆ ಹೋಬಳಿಯ 25ಕ್ಕೂ ಹೆಚ್ಚು ಕೆರೆಗಳನ್ನು ತುಂಬಿಸುವ ತೋಟಿ ಏತ ನೀರಾವರಿ ಯೋಜನೆಯ ಬಂಡಿಹಳ್ಳಿ ಬಳಿ ಸುಮಾರು 900 ಮೀಟರ್ ಪೈಪ್ ಲೈನ್ ಕಾಮಗಾರಿ ಸ್ಥಗಿತಗೊಂಡಿದ್ದ ಹಿನ್ನಲೆಯಲ್ಲಿ ಶನಿವಾರ ರೈತರು ಹಾಗೂ ರೈತ ಸಂಘದ ಮುಖಂಡರೊಂದಿಗೆ ನಡೆಸಿದ ಸಂಧಾನ ಸಭೆ ಯಶಸ್ವಿಯಾಗಿದೆಯೆಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.

ರಾಜ್ಯ ರೈತ ಸಂಘದ ಅಧ್ಯಕ್ಷ ಅರಳಾಪುರ ಮಂಜೇಗೌಡ ಹಾಗು ಯೋಜನೆ ವ್ಯಾಪ್ತಿಯ ರೈತರೊಂದಿಗೆ ರೈತ ಮುಖಂಡ ಅರಳಾಪುರ ಮಂಜೇಗೌಡ ಅವರ ನಿವಾಸದಲ್ಲಿ ಸಭೆ ನಡೆಸಿದ ಶಾಸಕ ಸಿ.ಎನ್.ಬಾಲಕೃಷ್ಣ ಮಾತನಾಡಿ, 52 ಕೋಟಿ ರೂ. ವೆಚ್ಚದ ತೋಟಿ ಏತ ನೀರಾವರಿ ಯೋಜನೆ ಈಗಾಗಲೇ ಶೇ. 90ರಷ್ಟು ಕಾಮಗಾರಿ ಪೂರ್ಣಗೊಂಡಿದೆ. ಜೊತೆಗೆ ಭೂ ಸ್ವಾಧೀನ ಪ್ರಕ್ರಿಯೆಯು ಪೂರ್ಣಗೊಂಡಿದೆ. ಸದ್ಯದಲ್ಲೇ ಯೋಜನೆಗೆ ಭೂಮಿ ನೀಡಿರುವ ರೈತರಿಗೆ ಪರಿಹಾರ ದೊರಕಲಿದೆಯೆಂದರು. ಚನ್ನರಾಯಪಟ್ಟಣದ ಅಮಾನಿ ಕೆರೆಯಿಂದ ಪೈಪ್‌ಲೈನ್ ಮೂಲಕ ನುಗ್ಗೇಹಳ್ಳಿ-ಹಿರೀಸಾವೆ ಹೋಬಳಿಗಳ ಸುಮಾರು 25ಕ್ಕೂ ಹೆಚ್ಚು ಕೆರೆಗಳು ಯೋಜನೆ ವ್ಯಾಪ್ತಿಗೆ ಬರಲಿವೆ. ಕಳೆದ ಅನೇಕ ದಿನಗಳಿಂದ ಅರಳಾಪುರ ರೈತರು ಸುಮಾರು 900 ಮೀಟರ್ ಪೈಪ್‌ಲೈನ್ ಕಾಮಗಾರಿಗೆ ಪರಿಹಾರದ ಹಿನ್ನಲೆಯಲ್ಲಿ ತಡೆ ಒಡ್ಡಿದ್ದರು. ಅದರಿಂದ ಕಾಮಗಾರಿಗೆ ಹಿನ್ನಡೆಯಾಗಿತ್ತು ಎಂದರು. ಜೂನ್-ಜುಲೈನಲ್ಲಿ ಪೂರ್ವ ಹಂಗಾಮಿನಲ್ಲಿ ಹೇಮಾವತಿ ನದಿಯಿಂದ ನಾಲೆಗಳಿಗೆ ನೀರು ಹರಿಸಿದರೆ ಮೊದಲ ಹಂತದಲ್ಲೇ ತೋಟಿ ಏತ ನೀರಾವರಿ ಯೋಜನೆ ವ್ಯಾಪ್ತಿಯ ಕೆರೆಗಳಿಗೆ ನೀರು ಹರಿಸುವ ಮೂಲಕ ಯೋಜನೆಗೆ ಚಾಲನೆ ನೀಡಲಾಗುತ್ತದೆ. ಕೊಟ್ಟ ಮಾತಿನಂತೆ ಯೋಜನೆ ಪೂರ್ಣಗೊಳಿಸಿ ಕೆರೆಗಳನ್ನು ತುಂಬಿಸಲಾಗುವುದೆಂದು ಭರವಸೆ ನೀಡಿದರು.

ರೈತ ಸಂಘದ ರಾಜ್ಯಾಧ್ಯಕ್ಷ ಅರಳಾಪುರ ಮಂಜೇಗೌಡ ಮಾತನಾಡಿ, ನಮಗೂ ರೈತರ ಮನಸ್ಥಿತಿ ಅರ್ಥವಾಗುತ್ತದೆ. ಈ ಭಾಗದಲ್ಲಿ ಬೈಪಾಸ್ ರಸ್ತೆ ಹೋಗಿರುವುದರಿಂದ ಜಮೀನಿಗೆ ಹೆಚ್ಚಿನ ಬೆಲೆ ಬಂದಿರುವುದರಿಂದ ಕೆಲ ರೈತರು ಹೆಚ್ಚಿನ ಪರಿಹಾರಕ್ಕಾಗಿ ಒತ್ತಾಯ ಮಾಡಿದ್ದರು. ಇದು ರೈತರ ಯೋಜನೆಯಾಗಿದ್ದು, ತಾಲ್ಲೂಕಿನ ರೈತರಿಗೆ ಹೆಚ್ಚಿನ ಅನುಕೂಲವಾಗುವುದರಿಂದ ಶಾಸಕರೊಂದಿಗೆ ನಡೆದ ಸಭೆಯಲ್ಲಿ ರೈತರ ಮನವೊಲಿಸಲಾಗಿದೆ. ಕಾಮಗಾರಿಗೆ ಯಾವ ತಡೆಯೊಡ್ಡದಂತೆ ತಿಳಿಸಲಾಗಿದೆ. ಶೀಘ್ರ ಪರಿಹಾರ ಕೊಡಿಸುವುದಾಗಿ ಶಾಸಕರು ತಿಳಿಸಿದ್ದಾರೆಂದರು.

ಹಿರಿಯ ಸಹಕಾರಿ ಧುರೀಣ ವಡ್ಡರಹಳ್ಳಿ ರಾಜಣ್ಣ, ಟಿಎಪಿಎಂಎಸ್ ನಿರ್ದೇಶಕ ತೋಟಿ ನಾಗರಾಜ್, ಮುಖಂಡರಾದ ವಾಸಣ್ಣ, ಹುಲಿಕೆರೆ ಸಂಪತ್ ಕುಮಾರ್ ಇತರರಿದ್ದರು.

# ಎಟಿಎಂಗೆ ಹಾಕಬೇಕಿದ್ದ ಹಣಕ್ಕೆ ಕನ್ನ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರ ವ್ಯಾಪ್ತಿಯ ವಿವಿಧ ಬ್ಯಾಂಕ್‌ಗಳ ಎಟಿಎಂಗಳಿಗೆ ಹಣ ತುಂಬಿಸುವ ಜವಾಬ್ದಾರಿ ಹೊಂದಿದ್ದ ಸಿಎಂಎಸ್ ಕಂಪನಿಯ ಇಬ್ಬರು ಸಿಬ್ಬಂದಿ (ಕಸ್ಟೋಡಿಯನ್) ಕೋಟ್ಯಂತರ ರೂ. ಹಣ ದುರ್ಬಳಕೆ ಮಾಡಿಕೊಂಡಿರುವ ಪ್ರಕರಣ ಬೆಳಕಿಗೆ ಬಂದಿದೆ.

ಸಿಎಂಎಸ್ ಕಂಪನಿಯಲ್ಲಿ ಕಳೆದ 10 ವರ್ಷಗಳಿಂದಲೂ ಕಸ್ಟೋಡಿಯನ್ ಆಗಿ ಕೆಲಸ ಮಾಡುತ್ತಿದ್ದ ಬೂವನಹಳ್ಳಿ ಗ್ರಾಮದ ನಂದೀಶ್ ಬಿ.ಎಲ್ ಹಾಗೂ ದಾಸರಕೊಪ್ಪಲಿನ ಎಂ.ಪಿ. ಮಧುಕುಮಾರ್ ಎಂಬುವವರ ವಿರುದ್ಧ ಆರೋಪ ಕೇಳಿಬಂದಿದೆ.

ನಗರದ ತಣ್ಣೀರುಹಳ್ಳ, ರಿಂಗ್ ರೋಡ್ ಸರ್ಕಲ್, ಆರ್.ಸಿ. ರಸ್ತೆ, ಇಂದಿರಾ ನಗರ, ದಾಸರಕೊಪ್ಪಲು, ಅರಳೇಪೇಟೆ, ಸಂತೇಪೇಟೆ, ಬಿ.ಎಂ. ರಸ್ತೆ, ವಲ್ಲಭಾಯಿ ರಸ್ತೆ, ನೆಹರೂ ರಸ್ತೆ, ಬಸಟ್ಟಿಕೊಪ್ಪಲು, ಹಿಮ್ಸ್ ಎಂಟಿಎಂಗಳಿಗೆ ಕಳೆದ ಐದು ವರ್ಷಗಳಿಂದ ಈ ಇಬ್ಬರೇ ಹಣ ತುಂಬಿಸುವ ಜವಾಬ್ದಾರಿ ಹೊತ್ತಿದ್ದರು.

ಇತ್ತೀಚೆಗೆ ಸುಮಾರು 18 ಎಟಿಎಂಗಳಿಗೆ ಈ ಇಬ್ಬರೂ ನಿಗದಿತ ಹಣ ತುಂಬಿಸದೇ ದುರುಪಯೋಗ ಮಾಡಿಕೊಂಡಿದ್ದಾರೆ. ಫೆ.18, 19 ರಂದು ಕಂಪನಿ ಆಡಿಟರ್ ಲಿಂಗರಾಜು ಜಿ.ಜಿ. ಅವರು ಹಣಕಾಸು ವ್ಯವಹಾರದ ಆಡಿಟ್ ಮಾಡಿದಾಗ 3,40,28,200 ರೂ. ಹಣ ಇಲ್ಲವಾಗಿರುವುದು ಕಂಡು ಬಂದಿದೆ. ಕೂಡಲೇ ಸಿಎಂಎಸ್ ಬ್ರಾಂಚ್ ಮ್ಯಾನೇಜರ್ ನೀಡಿದ ದೂರು ಆಧರಿಸಿ, ಇಬ್ಬರ ವಿರುದ್ಧ ಬಡಾವಣೆ ಪೊಲೀಸ್ ಠಾಣೆಯಲ್ಲಿ ಬಿಎನ್‌ಎಸ್ ಕಲಂ 306, 316(4), 318(4) ಹಾಗೂ 3(5) ಅಡಿಯಲ್ಲಿ ಪ್ರಕರಣ ದಾಖಲಿಸಿ ಪೊಲೀಸರು ತನಿಖೆ ಚುರುಕುಗೊಳಿಸಿ, ಆರೋಪಿಗಳ ಬಂಧನಕ್ಕೆ ಬಲೆ ಬೀಸಿದ್ದಾರೆ.

### ಇಬ್ಬರ ವಿರುದ್ಧ ಎಫ್‌ಐಆರ್




ಹಣ ಗುಳುಂ ಪ್ರಕರಣ ಬಯಲಾದ ನಂತರ ಸಂಬಂಧಪಟ್ಟ ಬ್ಯಾಂಕ್ ಗಳಿಗೂ ಮಾಹಿತಿ ನೀಡಲಾಗಿದೆ. ಈ ಕುರಿತು ಮಾಹಿತಿ ನೀಡಿದ ಸಿಎಂಎಸ್ ಸಂಸ್ಥೆಯ ಕರ್ನಾಟಕ ಉಸ್ತುವಾರಿ, ನಿವೃತ್ತ ಎಎಸ್ಪಿ ನಟರಾಜ್ ಅವರು, ನಗರದ ಮಾರ್ಗ-1 ರ ವ್ಯಾಪ್ತಿಯ 18 ಎಟಿಎಂಗಳ ಸಂಪೂರ್ಣ ಜವಾಬ್ದಾರಿ ನಂದೀಶ್ ಮತ್ತು ಮಧುಕುಮಾರ್‌ಗೆ ನೀಡಲಾಗಿತ್ತು.

> ಎಟಿಎಂಗಳಿಗೆ ಹಣ ಹಾಕುವಾಗ 5 ಲಕ್ಷ ರೂ. ಹಾಕಿ, 10 ಲಕ್ಷ ರೂ. ಎಂದು ಬರೆಯಬಹುದು. ಎಟಿಎಂ ನಿರ್ವಹಣೆ ಇದ್ದಾಗ ಅವರೇ ಹೋಗುತ್ತಾರೆ. ಆಗ ಓಪನ್ ಮಾಡಿದಾಗ ಕ್ಯಾಶ್ ತೆಗೆದು ಕೊಳ್ಳಬಹುದು. ಒಟ್ಟಾರೆ ಎರಡು ರೀತಿಯಲ್ಲಿ ಹಣ ದುರ್ಬಳಕೆ ಮಾಡಿರುವ ಅನುಮಾನ ಇದೆ.
>
> **- ನಟರಾಜ್, ಸಿಎಂಎಸ್ ವ್ಯವಸ್ಥಾಪಕ**

ಫೆ.8 ರಂದು ನಡೆದ ನಿಯಮಿತ ಆಡಿಟ್ ವೇಳೆ ಎಲ್ಲವೂ ಸರಿಯಾಗಿತ್ತು. ಆದರೆ ನಂತರ ಶಾಖಾ ವ್ಯವಸ್ಥಾಪಕ ರಾಜು ಅವರು ಪರಿಶೀಲನೆ ನಡೆಸಿದಾಗ ಕೆಲ ಎಟಿಎಂಗಳಲ್ಲಿ ಹಣದ ಕೊರತೆ ಇರುವುದು ಕಂಡು ಬಂದಿದೆ. ತಕ್ಷಣ ಸಮಗ್ರ ಆಡಿಟ್ ನಡೆಸಿದಾಗ ದೊಡ್ಡ ಪ್ರಮಾಣದ ಹಣ ದುರುಪಯೋಗವಾಗಿರುವುದು ಕಂಡುಬಂದಿದೆ.

ಎಟಿಎಂಗೆ ಹಣ ಹಾಕುವುದು ಹಾಗೂ ನಿರ್ವಹಣೆ ಮಾಡುವ ಎಲ್ಲ ಜವಾಬ್ದಾರಿ ಇಬ್ಬರದ್ದೇ ಆಗಿದ್ದು, ಎಟಿಎಂ ತೆರೆಯುವ ಪಾಸ್‌ವರ್ಡ್ ಕೂಡ ಅವರ ಬಳಿಯೇ ಇರುತ್ತದೆ. ಹೀಗಾಗಿ, ಅವರ ಹೊರತಾಗಿ ಬೇರೆ ಯಾರಿಂದಲೂ ಹಣ ತೆಗೆಯಲು ಸಾಧ್ಯವಿಲ್ಲ ಎಂಬುದು ಪ್ರಾಥಮಿಕ ಮಾಹಿತಿ ಎಂದರು. ಹಣ ತುಂಬಿಸುವ ಮೊತ್ತ ಮತ್ತು ಗ್ರಾಹಕರು ಡ್ರಾ ಮಾಡಿದ ಮೊತ್ತವನ್ನು ಹೋಲಿಕೆ ಮಾಡಿದಾಗ ಮಾತ್ರ ಇಂತಹ ಅಕ್ರಮ ಬಯಲಾಗುತ್ತವೆ ಎಂದು ನಟರಾಜ್ ಸ್ಪಷ್ಟಪಡಿಸಿದರು.

ಸಿಎಂಸಿ ಯಂತ್ರದ ಮೂಲಕ ಸುಮಾರು 200 ಎಟಿಎಂ ಹಾಸನ ಜಿಲ್ಲೆಯಲ್ಲಿವೆ.

ಆರೇಳು ರೂಟ್ ನಮ್ಮಲಿದೆ. ಅದರ ಒಂದು ರೂಟಿನಲ್ಲಿ ನಂದೀಶ್ ಮತ್ತು ಮಧು ಕುಮಾರ್ ಕಳೆದ 10 ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ಇದೀಗ ಇವರೇ ತಪ್ಪು ಮಾಡಿದ್ದಾರೆ ಎಂಬುದು ಸರ್‌ಪ್ರೈಜ್ ಆಡಿಟ್ ವೇಳೆ ಗೊತ್ತಾಗಿದೆ ಎಂದರು.

ಎಟಿಎಂ ಓಪನ್ ಮಾಡಲು ಅವರಿಬ್ಬರಿಗೇ ಅಧಿಕಾರ ಇದೆ. ಆಡಿಟ್ ಮಾಡು ವಾಗಲೂ ಅವರು ಇರಬೇಕು. ಆಡಿಟ್ ವೇಳೆ 18 ಎಟಿಎಂ ವ್ಯಾಪ್ತಿಯಲ್ಲಿ ಹಣ ಸ್ವಾಹ ವಿಚಾರ ಬೆಳಕಿಗೆ ಬಂದಿದ್ದು, ತನಿಖೆ ಮುಂದುವರಿದಿದೆ ಎಂದು ಸ್ಪಷ್ಟಪಡಿಸಿದರು.

## ಬೆಲೆ ಕುಸಿತದಿಂದ ಕಂಗಾಲಾದ ಹೊಗೆಸೊಪ್ಪು ಬೆಳೆಗಾರರು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲೂಕಿನ ರಾಮನಾಥಪುರ ತಂಬಾಕು ಮಾರುಕಟ್ಟೆಯಲ್ಲಿ ಕನಿಷ್ಟ ಮತ್ತು ಗರಿಷ್ಟ ದರದಲ್ಲಿ ಏರಿಕೆ ಕಾಣಬೇಕಿದ್ದ ಹೊಗೆಸೊಪ್ಪು ಬೆಲೆ ದಿಢೀರ್ ಪಾತಾಳಕ್ಕೆ ಕುಸಿದು ಬೆಳೆಗಾರರು ನಷ್ಟದ ಭೀತಿಯಲ್ಲಿದ್ದಾರೆ.

ಈ ಬಾರಿ ಹರಾಜು ಪ್ರಕ್ರಿಯೆ ಪ್ರಾರಂಭದ ದಿನಗಳಲ್ಲಿ ಒಂದು ಕೆ.ಜಿ. ತಂಬಾಕು 320 ರೂಪಾಯಿಂದ ಆರಂಭಿಸಲಾಗಿತ್ತು. ನಂತರದ ದಿನಗಳಲ್ಲಿ 320ರಿಂದ 322 ರೂಪಾಯಿಗೆ



ಏರಿಕೆ ಕಂಡಿತ್ತು.

ವರ್ತಕರು ಮತ್ತಷ್ಟು ಉತ್ತಮ ದರ ನೀಡುವ ಆಶಾಭಾವನೆ ರೈತರಲ್ಲಿತ್ತು. ಇದೀಗ ಗುಣಮಟ್ಟದ ಒಂದು ಕೆ.ಜಿ. ತಂಬಾಕು 320 ರೂಪಾಯಿಗೆ ಮಾರಾಟವಾಗುವ ಬದಲಿಗೆ 270 ರೂ. ಇಳಿಕೆಯಾಗಿದೆ. ಗುಣಮಟ್ಟದ ಸಾಕಷ್ಟು ಬೇಲ್‌ಗಳನ್ನು 250 ರೂಪಾಯಿಗೆ ಕೊಳ್ಳಲಾಗುತ್ತಿದೆ. ಕೆಳ ದರ್ಜೆಯ ಬೇಲ್‌ಗಳಿಗೆ 200 ರೂ. ನೀಡುತ್ತಿದ್ದು ಬೆಲೆಯಲ್ಲಿ ರೈತರಿಗೆ ಮೋಸವಾಗುತ್ತಿದೆ.

ಕೇಂದ್ರ ಸರ್ಕಾರ ತಂಬಾಕು ಮೇಲಿನ ಅಬಕಾರಿ ಸುಂಕ ಮತ್ತು ಜಿಎಸ್‌ಟಿ ದರ ಏರಿಕೆ ಮಾಡಲು ಮುಂದಾಗಿರುವುದನ್ನು ವಿರೋಧಿಸಿ ಕಂಪನಿಗಳು ಜ. 23ರಿಂದ ಏಕಾಏಕಿ ಹರಾಜು ಪ್ರಕ್ರಿಯೆ ಸ್ಥಗಿತಗೊಳಿಸಿದ್ದರು. ಅದರಿಂದ ರಾಮನಾಥಪುರ ಮಾರುಕಟ್ಟೆಯಲ್ಲಿ ಹೊಗೆಸೊಪ್ಪು ಮಾರಾಟ ಮಾಡಲು ಮುಂದಾಗಿದ್ದ ರೈತರು ಸಂಕಷ್ಟಕ್ಕೆ ಸಿಲುಕಿದ್ದರು.

ಮತ್ತೆ ಫೆ. 5ರಂದು ತಂಬಾಕು ಖರೀದಿಸಲು ವರ್ತಕರು ಮುಂದಾಗಿದ್ದು ಆಂಧ್ರಪ್ರದೇಶದ ಮಾರುಕಟ್ಟೆಯಲ್ಲಿ ನೀಡಿದ ಬೆಲೆಯನ್ನು ಇಲ್ಲಿನ ಮಾರುಕಟ್ಟೆಯಲ್ಲಿ ಮುಂದುವರಿಸಬೇಕು. ಬೆಲೆ ತಾರತಮ್ಯ ಹೋಗಲಾಡಿಸಿ ರೈತರ ನೆರವಿಗೆ ಬರಬೇಕೆಂದು ಪ್ರತಿಭಟಿಸಿದ್ದರೂ ಪ್ರಯೋಜವಾಗಿಲ್ಲ.

## ಬೈಕ್ ವ್ಹೀಲಿಂಗ್ ಹುಚ್ಚಾಟ ನಿಯಂತ್ರಣಕ್ಕೆ ಆಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರ ಹಾಗೂ ಜಿಲ್ಲೆಯಲ್ಲಿ ಮಿತಿ ಮೀರಿರುವ ವ್ಹೀಲಿಂಗ್ ಪುಂಡರ ಹಾವಳಿ, ಮಾದಕ ವ್ಯಸನಿಗಳ ಹುಚ್ಚಾಟ ಮೊದಲಾದ ಕಾನುನು ಬಾಹಿರ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು ಎಂದು ರಾಷ್ಟ್ರ ರಕ್ಷಣಾ ಸೇನೆಯ ರಾಜ್ಯ ಸಂಚಾಲಕ ಸುರೇಶ್‌ಗೌಡ, ಶ್ರೀರಾಮಸೇನೆ ಜಿಲ್ಲಾಧ್ಯಕ್ಷ ಧರ್ಮನಾಯಕ್ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿ, ನಗರ ಹಾಗೂ




ಜಿಲ್ಲೆಯಲ್ಲಿ ಕೊಲೆ-ಸುಲಿಗೆ ಹೆಚ್ಚಾಗಿವೆ. 80 ಅಡಿ ರಸ್ತೆ ಸೇರಿದಂತೆ ಶಾಲಾ ಕಾಲೇಜು ಬಳಿ ಗಾಂಜಾ ಸೇರಿದಂತೆ ಮಾದಕ ವಸ್ತುಗಳ ಹಾವಳಿ ಹೆಚ್ಚಾಗಿದೆ. ಇತ್ತೀಚೆಗೆ ಎಂಡಿಎನ್ ಮಾದಕವಸ್ತು ಕಳ್ಳಸಾಗಣೆ ಪ್ರಕರಣ ಹೆಚ್ಚಾಗುತ್ತಿದೆ. ಕೆಲವರು ಸಾರ್ವಜನಿಕ ಸ್ಥಳಗಳಲ್ಲಿ ಅಸಭ್ಯ ವರ್ತನೆ ಹೆಚ್ಚಾಗಿವೆ. ಇದು ನಾಗರಿಕರ ಅಸಮಾಧಾನಕ್ಕೆ ಕಾರಣವಾಗಿದೆ ಎಂದರು.

ಇದರ ಜೊತೆಗೆ ಬೈಕ್ ವ್ಹೀಲಿಂಗ್ ಹಾವಳಿ ಹೆಚ್ಚಾಗಿದೆ. ಇದರಿಂದ ಸಾರ್ವಜನಿಕರಿಗೆ ತೊಂದರೆ ಆಗಿದೆ. ಇಂಥವರ ಆಟಾಟೋಪಕ್ಕೆ ಪೊಲೀಸರು ಕೂಡಲೇ ಕಡಿವಾಣ ಹಾಕಬೇಕು ಎಂದು ಆಗ್ರಹಿಸಿದರು.

ಪೊಲೀಸರು ಕಾರ್ಯಾಚರಣೆಗೆ ಮುಂದಾದಾಗ, ರಾಜಕಾರಣಿಗಳು ಮಧ್ಯೆ ಪ್ರವೇಶ ಮಾಡಬಾರದು, ಪ್ರವಾಸೋದ್ಯಮಕ್ಕೆ ಹೆಸರುವಾಸಿಯಾಗುವ ಜಿಲ್ಲೆಯ ಸ್ವಾಸ್ಥ್ಯವನ್ನು ಹಾಳು ಮಾಡುವ ಕೆಲಸ ಆಗಬಾರದು ಎಂದರು.

ಈ ಬಗ್ಗೆ ಇನ್ನಾದರೂ ಸಂಬಂಧಪಟ್ಟವರು ಎಚ್ಚೆತ್ತು ಕಾನೂನು ವಿರೋಧಿ ಚಟುವಟಿಕೆಗಳಿಗೆ ಕಡಿವಾಣ ಹಾಕಬೇಕು. ಪುಂಡರ ಮೇಲೆ ಕಠಿಣ ಕ್ರಮ ಆಗಬೇಕು. ಇಲ್ಲದೇ ಇದ್ದರೆ ನಾವೇ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ದಾಖಲಿಸಿ ನ್ಯಾಯ ಕೇಳಬೇಕಾಗುತ್ತದೆ ಎಂದು ಎಚ್ಚರಿಸಿದರು.

# ಬೇಸಿಗೆಯಲ್ಲಿ ನೀರಿನ ದಾಹ ತಣಿಸಲು ಜಿ.ಪಂ. ಕ್ರಮ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬೇಸಿಗೆ ಆರಂಭವಾಗುತ್ತಿರುವ ಹಿನ್ನೆಲೆ ಜಿಲ್ಲಾದ್ಯಂತ ಕುಡಿಯುವ ನೀರಿಗೆ ಸಮಸ್ಯೆ ಉಂಟಾಗದಂತೆ ಜಿಲ್ಲಾ ಪಂಚಾಯಿತಿ ಮುನ್ನೆಚ್ಚರಿಕಾ ಕ್ರಮ ಕೈಗೊಂಡಿದ್ದು, ತಾಲ್ಲೂಕು ಹಾಗೂ ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.

ಗ್ರಾಮ ಪಂಚಾಯಿತಿಗಳಲ್ಲಿ ಚುನಾಯಿತ ಪ್ರತಿನಿಧಿಗಳ ಅಧಿಕಾರಾವಧಿ ಮುಗಿದಿರುವ ಹಿನ್ನೆಲೆಯಲ್ಲಿ ಆಡಳಿತಾಧಿಕಾರಿಗಳೇ ನಿಗಾ ವಹಿಸಬೇಕಿದೆ. ಜನಪ್ರತಿನಿಧಿಗಳ ಅನುಪಸ್ಥಿತಿಯಲ್ಲಿ ಪರಿಸ್ಥಿತಿ ನಿಬಾಯಿಸಬೇಕಿದ್ದು ಅದಕ್ಕೆ ತಯಾರಾಗಿರುವಂತೆ ನಿರ್ದೇಶನ ನೀಡಲಾಗಿದೆ. ಕಳೆದ ವರ್ಷ ಜಿಲ್ಲಾದ್ಯಂತ 38 ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗುವ ಅಂದಾಜಿತ್ತು. ಆದ್ದರಿಂದ ಈ ಬಾರಿಯೂ ಅಂತಹ ಗ್ರಾಮಗಳನ್ನು ಕೇಂದ್ರಿಕರೀಸಿ ಈಗಿನಿಂದಲೇ ಪರಿಹಾರ ಕ್ರಮ ಕೈಗೊಳ್ಳಲಾಗುತ್ತಿದೆ. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ ಈ ಸಂಬಂಧ ಅಧಿಕಾರಿಗಳ ಸಭೆ ನಡೆಸಿದ್ದಾರೆ.



> ಬೇಸಿಗೆ ಸಮಯದಲ್ಲಿ ಗ್ರಾಮೀಣ ಭಾಗದಲ್ಲಿ ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ನಿಗಾ ವಹಿಸಲಾಗಿದೆ. ಜಿಲ್ಲೆಯಲ್ಲಿ 264 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 2300 ಗ್ರಾಮಗಳಿದ್ದು, ಸಮಸ್ಯೆ ಕೇಳಿಬರುವ ಸ್ಥಳಕ್ಕೆ ಖುದ್ದಾಗಿ ಭೇಟಿ ನೀಡಿ ಪರಿಶೀಲಿಸುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ.
>
> **- ಬಿ.ಆರ್.ಪೂರ್ಣಿಮಾ, ಜಿಪಂ ಸಿಇಒ**

ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಎಂಜಿನಿಯರ್‌ಗಳು ಹಾಗೂ ಸಂಬಂಧಿತ ಅಧಿಕಾರಿಗಳೊಂದಿಗೆ ಈಗಾಗಲೇ ಹಲವು ಸುತ್ತಿನ ಸಭೆಗಳು ನಡೆದಿವೆ. ನೀರಿನ ಮಟ್ಟ ಕುಸಿತವಾಗುವ ಪ್ರದೇಶಗಳನ್ನು ಗುರುತಿಸಿ ತುರ್ತು ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

ಗ್ರಾಮೀಣ ಪ್ರದೇಶಗಳ ಬೋರ್‌ವೆಲ್, ಕೈ ಪಂಪ್ ಮತ್ತು ಓವರ್ ಹೆಡ್ ಟ್ಯಾಂಕ್‌ಗಳ ಕಾರ್ಯಕ್ಷಮತೆ ಪರಿಶೀಲನೆ ಮಾಡಲಾಗುತ್ತಿದೆ. ಕೆಟ್ಟಿರುವ ಮೋಟಾರ್ ಮತ್ತು ಪೈಪ್‌ಲೈನ್‌ಗಳ ದುರಸ್ತಿ ಕಾರ್ಯಕ್ಕೆ ಆದ್ಯತೆ ನೀಡಲಾಗಿದೆ. ಅಗತ್ಯವಿದ್ದಲ್ಲಿ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡಲು ತುರ್ತು ಕಾರ್ಯಯೋಜನೆ ಸಿದ್ಧಪಡಿಸಲಾಗಿದೆ.

## ಹರಿಹರಪುರದಲ್ಲಿ ಸಮಸ್ಯೆ ಇರಲಿಲ್ಲ

ದುದ್ದ ಹೋಬಳಿ ಹರಿಹರಪುರದಲ್ಲಿ ಕಳೆದ ಒಂದು ತಿಂಗಳಿಂದ ಕುಡಿಯುವ ನೀರು ಪೂರೈಕೆ ಆಗುತ್ತಿಲ್ಲವೆಂದು ನಿವಾಸಿಗಳು ಇತ್ತೀಚೆಗೆ ಪ್ರತಿಭಟನೆ ನಡೆಸಿದ್ದರು. ಆದರೆ, ಅಧಿಕಾರಿಗಳು ಆರೋಪವನ್ನು ಅಲ್ಲಗಳೆದಿದ್ದಾರೆ. ಗ್ರಾಮದಲ್ಲಿ 20 ಮನೆಗಳಿದ್ದು ಜೆಜೆಂ ಯೋಜನೆಯಡಿ ಎಲ್ಲಾ ಮನೆಗೂ ನಲ್ಲಿ ವ್ಯವಸ್ಥೆ ಮಾಡಲಾಗಿದೆ. ಪ್ರತಿದಿನ 40 ರಿಂದ 50 ಸಾವಿರ ಲೀಟರ್ ನೀರು ಹರಿಸಲಾಗುತ್ತದೆ. ಆದರೆ, ಗ್ರಾಮಸ್ಥರು ಟ್ಯಾಪ್ ಆನ್ ಮಾಡಿ ನೀರು ಖಾಲಿ ಆಗಿದೆಯೆಂದು ಸುಳ್ಳು ಸುದ್ದಿ ಹರಡಿದರು. ನಮ್ಮ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿದಾಗ ಸತ್ಯ ತಿಳಿದಿದೆ. ಮುಂದೆಯೂ ಇದೇ ರೀತಿ ಮಾಡಿದರೆ ನೀರಿನ ಸಂಪರ್ಕ ಕಡಿತಗೊಳಿಸಬೇಕಾಗುತ್ತದೆಂದು ಬಿ.ಆರ್.ಪೂರ್ಣಿಮಾ ಅವರು ಎಚ್ಚರಿಕೆ ನೀಡಿದ್ದಾರೆ.

ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕುಡಿಯುವ ನೀರಿನ ಮೇಲ್ವಿಚಾರಣೆ ಸಮಿತಿಗಳನ್ನು ಸಕ್ರಿಯಗೊಳಿಸಿ, ನೀರಿನ ವ್ಯರ್ಥ ಬಳಕೆ ತಪ್ಪಿಸುವ ಕುರಿತು ಜಾಗೃತಿ ಕಾರ್ಯಕ್ರಮ ಹಮ್ಮಿಕೊಳ್ಳಲು ಸೂಚಿಸಲಾಗಿದೆ.

ಬೇಸಿಗೆ ತೀವ್ರಗೊಳ್ಳುವ ಮುನ್ನವೇ ಎಲ್ಲಾ ಸಿದ್ಧತೆಗಳನ್ನು ಪೂರ್ಣಗೊಳಿಸಿ ಜಿಲ್ಲೆಯ ಯಾವ ಭಾಗದಲ್ಲೂ ಕುಡಿಯುವ ನೀರಿನ ಅಭಾವ ಉಂಟಾಗದಂತೆ ಕ್ರಮ ಕೈಗೊಳ್ಳಲಾಗುವುದೆಂದು ಜಿಲ್ಲಾ ಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಬಿ.ಆರ್.ಪೂರ್ಣಿಮಾ ಹೇಳಿದ್ದಾರೆ.

ಗ್ರಾಮೀಣ ಪ್ರದೇಶಗಳಲ್ಲಿ ಖಾಸಗಿ ಬೋರವೆಲ್‌ಗಳ ಮೂಲಕ ನೀರು ಪೂರೈಸಲು ಕ್ರಮ ಕೈಗೊಳ್ಳುತ್ತಿದ್ದು, ರೈತರಿಂದ ಬಾಡಿಗೆ ಪಡೆಯಲು ಅಧಿಕಾರಿಗಳು ನಿರ್ಧರಿಸಿದ್ದಾರೆ. ಇನ್ನು ಕೆಲವೆಡೆ ರೈತರು ಉಚಿತವಾಗಿ ನೀರು ಪೂರೈಸಲು ಒಪ್ಪಿಕೊಂಡಿದ್ದಾರೆ. ಹಳೇಬೀಡು, ಬಾಣಾವರ ಭಾಗದಲ್ಲಿ ಪ್ರತಿವರ್ಷ ಸರ್ಕಾರದಿಂದ ಯಾವ ಹಣವನ್ನು ಪಡೆಯದೆ ಉಚಿತವಾಗಿ ನೀರು ನೀಡಲಾಗುತ್ತಿದೆ. ಈ ಬಾರಿಯೂ ಅವರನ್ನೇ ಸಂಪರ್ಕಿಸಲಾಗಿದೆ. ಇನ್ನು ಕೆಲವರು ವಿದ್ಯುತ್ ಬಿಲ್ ಪಾವತಿಸಿದರೆ ನೀರು ಕೊಡುವುದಾಗಿ ಭರವಸೆ ನೀಡಿದ್ದಾರೆ.

# ಹಿಮೋಫಿಲಿಯಾ ರೋಗಿಗಳ ಬದುಕು ಸುಧಾರಣೆಗೆ ಆದ್ಯತೆ ನೀಡಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಹಿಮೋಫಿಲಿಯಾ ಎಂಬುದು ಅಪರೂಪದ ರೋಗವಾದರೂ ಅದರ ನೋವು ಮತ್ತು ಸಂಕಷ್ಟಗಳು ರೋಗಿ ಹಾಗೂ ಕುಟುಂಬದ ಜೀವನವನ್ನೇ ಬದಲಾಯಿಸುತ್ತವೆ. ಈ ರೋಗಿಗಳ ಆರೋಗ್ಯ ಭದ್ರತೆ ಮತ್ತು ಗೌರವಯುತ ಬದುಕಿಗಾಗಿ ಸಮಾಜದ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದು ಪದ್ಮಶ್ರೀ ಪುರಸ್ಕೃತ ಡಾ. ಸುರೇಶ್ ಹನಗವಾಡಿ ಹೇಳಿದರು.

ನಗರದ ನಂದಗೋಕುಲ ಕನ್ವೆನ್ಷನ್ ಹಾಲ್‌ನಲ್ಲಿ ನಡೆದ ವೈದ್ಯರ ಹಬ್ಬ2026 ಹಾಗೂ ನ್ಯೂಬರ್ಗ್ ಆನಂದದಾಸ್ ಡಯಾಗ್ನೋಸ್ಟಿಕ್ ಲ್ಯಾಬೋರೇಟರಿಯ ವಾರ್ಷಿಕೋತ್ಸವದಲ್ಲಿ ಮಾತನಾಡಿದ ಅವರು, ಹಿಮೋಫಿಲಿಯಾ ರೋಗದ ಸ್ವರೂಪ, ರಕ್ತದ ಜಮಾವಣೆ ಸಮಸ್ಯೆಯಿಂದ ಉಂಟಾಗುವ ಗಂಭೀರ ಪರಿಣಾಮ ಹಾಗೂ ತಡವಾದ ಚಿಕಿತ್ಸೆಯಿಂದ ಎದುರಾಗುವ ಅಪಾಯಗಳನ್ನು ವಿವರಿಸಿದರು.

ಹಿಮೋಫಿಲಿಯಾ ಕುರಿತು ಇನ್ನೂ ಗ್ರಾಮೀಣ ಭಾಗಗಳಲ್ಲಿ ಅರಿವು ಕೊರತೆ ಇರುವುದನ್ನು ಉಲ್ಲೇಖಿಸಿದ ಅವರು, ಸಮಯೋಚಿತ ಪರೀಕ್ಷೆ, ಸರಿಯಾದ ಮಾರ್ಗದರ್ಶನ ಮತ್ತು ನಿರಂತರ ಚಿಕಿತ್ಸೆ ಮೂಲಕ ರೋಗಿಗಳು ಸಾಮಾನ್ಯ ಜೀವನ ನಡೆಸಲು ಸಾಧ್ಯವಿದೆ ಎಂದು ತಿಳಿಸಿದರು.

ಈ ನಿಟ್ಟಿನಲ್ಲಿ ಕರ್ನಾಟಕ ಹಿಮೋಫಿಲಿಯಾ ಸೊಸೈಟಿಯು ಹಲವು ವರ್ಷಗಳಿಂದ ಸಮಾಜಮುಖಿ ಕಾರ್ಯಗಳನ್ನು ಕೈಗೊಂಡು ರೋಗಿಗಳಿಗೆ ನೆರವಾಗುತ್ತಿರುವುದನ್ನು ವಿವರಿಸಿದರು.




ಭಾರತೀಯ ವೈದ್ಯಕೀಯ ಸಂಘದ ಹಾಸನ ಶಾಖೆಯ ಅಧ್ಯಕ್ಷ ಡಾ. ಎನ್. ಶ್ರೀರಂಗ ಉದ್ಘಾಟಿಸಿದರು. ಆನಂದದಾಸ್ ಡಯಾಗ್ನೋಸ್ಟಿಕ್ ಲ್ಯಾಬೋರೇಟರಿಯ ಡಾ. ಎಚ್.ಆರ್. ದೇವದಾಸು ಸ್ವಾಗತಿಸಿದರು. ನ್ಯೂಬರ್ಗ್ ಗ್ರೂಪ್‌ನ ಮುಖ್ಯ ವೈದ್ಯಕೀಯ ನಿರ್ದೇಶಕ ಡಾ. ಸುಜಯ್ ಪ್ರಸಾದ್ ಅವರು ವೈದ್ಯಕೀಯ ಕ್ಷೇತ್ರದಲ್ಲಿ ನವೀಕರಣ ಮತ್ತು ಗುಣಮಟ್ಟದ ಸೇವೆಗಳ ಅಗತ್ಯತೆಯನ್ನು ಒತ್ತಿಹೇಳಿದರು.

ಡಾ. ಸುರೇಶ್ ಹನಗವಾಡಿ ಹಾಗೂ ಅವರ ಪತ್ನಿ ಡಾ. ಮೀರಾ ಎಸ್. ಹನಗವಾಡಿ ಅವರನ್ನು ಆತ್ಮೀಯವಾಗಿ ಸನ್ಮಾನಿಸಲಾಯಿತು. ಜೊತೆಗೆ ಕರ್ನಾಟಕ ಹಿಮೋಫಿಲಿಯಾ ಸೊಸೈಟಿಯ ಕಾರ್ಯಕಾರಿ ಅಧಿಕಾರಿ ನವೀನ್ ಹವಳಿ ಅವರ ಸೇವೆಯನ್ನು ಗುರುತಿಸಿ ಗೌರವಿಸಲಾಯಿತು. ಸಭೆಯ ಬಳಿಕ ವೈದ್ಯರಿಂದಲೇ ವೈವಿಧ್ಯಮಯ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ವಿವಿಧ ನಗರಗಳಿಂದ ಆಗಮಿಸಿದ ತಜ್ಞ ವೈದ್ಯರ ಉಪಸ್ಥಿತಿಯಿಂದ ಕಾರ್ಯಕ್ರಮಕ್ಕೆ ವಿಶೇಷ ಕಳೆ ತಂದುಕೊಟ್ಟಿತು.

# ಮಕ್ಕಳನ್ನು ಮೊಬೈಲ್‌ನಿಂದ ದೂರವಿಡಿ: ಜಿಲ್ಲಾಧಿಕಾರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಎಸ್‌ಎಸ್‌ಎಲ್‌ಸಿ ಪರೀಕ್ಷೆ ಮುಗಿಯುವವರೆಗೂ ಮೊಬೈಲ್‌ನಿಂದ ದೂರವಿದ್ದು, ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಪಡೆಯುವ ಮೂಲಕ ತಮ್ಮ ಮುಂದಿನ ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳುವಂತೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಸಲಹೆ ನೀಡಿದರು.

ನಗರ ಗಂಧದ ಕೋಟಿ ಆವರಣದಲ್ಲಿರುವ ಸರ್ಕಾರಿ ಬಾಲಕರ ಪ್ರೌಢಶಾಲೆ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಶಾಲಾ ಶಿಕ್ಷಣ ಇಲಾಖೆಯ ವತಿಯಿಂದ ಹಮ್ಮಿಕೊಂಡಿದ್ದ ಎಸ್‌ಎಸ್‌ಎಲ್‌ಸಿ ಪರೀಕ್ಷಾ ಸಂಭ್ರಮ ಹಾಗೂ ಯಶಸ್ಸು ಫ್ರೆಡ್ ಫ್ರೆಂಡ್‌ನ ಆನ್‌ಲೈನ್ ಸಂವಾದ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಪರೀಕ್ಷೆ ಸಿದ್ಧತೆಗಳ ವೇಳೆಯಲ್ಲಿ ಆರೋಗ್ಯವನ್ನು ಸುಸ್ಥಿಯಲ್ಲಿ ಇಟ್ಟುಕೊಳ್ಳಬೇಕು. ಹೊರಗಿನ ಆಹಾರ




ಸೇವಿಸಬಾರದು, ಮನೆಯಲ್ಲಿಯೇ ತಯಾರಿಸಿದ ಶುದ್ಧ ಆಹಾರವನ್ನು ಮಾತ್ರ ಬಳಸಬೇಕು, ಪರೀಕ್ಷೆ ಎದುರಿಸಲು ಮಾನಸಿಕವಾಗಿ ಸಿದ್ಧವಾಗಬೇಕು ಎಂದರು.

ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಮುಂದಿನ ಭವಿಷ್ಯಕ್ಕಾಗಿ ಪ್ರತಿವಾರ 16 ಅಂಶಗಳನ್ನು ಒಳಗೊಂಡ ಫ್ರೈಡೆ ಫ್ರೆಂಡ್ ಎಂಬ ವಿನೂತನ ಕಾರ್ಯಕ್ರಮ ಆಯೋಜಿಸಲಾಗಿದೆ 536 ಶಾಲೆಗಳಲ್ಲಿ ಮಕ್ಕಳು ಈ ಸಂವಾದವನ್ನು ಆಲಿಸಲಿದ್ದಾರೆ ಎಂದರು.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 20 ಸಾವಿರಕ್ಕೆ ಹೆಚ್ಚು ಮಕ್ಕಳು ನೊಂದಾಯಿಸಿಕೊಂಡಿದ್ದು, ಜಿಲ್ಲೆಯ ಶಿಕ್ಷಕರು, ಮುಖ್ಯೋಪಾಧ್ಯಾಯರು ಶ್ರಮದಿಂದ ಉತ್ತಮ ಫಲಿತಾಂಶ ನಿರೀಕ್ಷಿಸಲಾಗಿದೆ. ಶಿಕ್ಷಕರ ಶ್ರಮವನ್ನು ಮಕ್ಕಳು ಎಂದಿಗೂ ಮರೆಯಬಾರದು ಎಂದು ತಿಳಿಸಿದರು.

ಪರೀಕ್ಷಾ ಕೇಂದ್ರಕ್ಕೆ ಸುಮಾರು 40 ನಿಮಿಷ ಮುಂಚಿತವಾಗಿ ಇರಬೇಕು, ಗ್ರಾಮೀಣ ಪ್ರದೇಶದಿಂದ ಬರುವ ಮಕ್ಕಳಿಗೆ ಬಸ್ ಸಮಯ ಬದಲಾವಣೆ ಅಗತ್ಯವಿದ್ದರೆ ಮೊದಲೇ ಮಾಹಿತಿ ನೀಡಬೇಕು ಅಗತ್ಯ ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

ಪ್ರತಿಯೊಂದು ಪ್ರಶ್ನೆಗಳಿಗೂ ಉತ್ತರ ಬರೆಯಬೇಕು, ಪ್ರತಿಯೊಬ್ಬ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಬೇಕು ಪರೀಕ್ಷೆ ಬರೆಯುವ ಸಮಯದಲ್ಲಿ ಗೊಂದಲ ಇರಬಾರದು ಎಂದರು.

ಪರೀಕ್ಷೆಯಲ್ಲಿ ಉತ್ತೀರ್ಣ ಆಗುತ್ತೇನೆ ಎಂದು ವಿದ್ಯಾರ್ಥಿಗಳು ಮಾನಸಿಕವಾಗಿ ಸಿದ್ಧವಾಗಿರಬೇಕು. ಜಿಲ್ಲೆಯ ಎಲ್ಲಾ ಶಾಲೆಗಳು ಶೇ. 100ರಷ್ಟು ಫಲಿತಾಂಶವನ್ನು ನಿರೀಕ್ಷಿಸಲಾಗಿದೆ ಎಂದು ಅವರು ತಿಳಿಸಿದರು.

ಪರೀಕ್ಷೆ ಮುಗಿದ ನಂತರವೇ ಮುಂದೆ ಯಾವ ವಿಷಯವನ್ನು ಆಯ್ಕೆ ಮಾಡಿಕೊಳ್ಳಬೇಕು ಎಂಬುದನ್ನು ಯೋಚಿಸಿರಬೇಕು, ಉನ್ನತ ಶಿಕ್ಷಣವನ್ನು ಪಡೆಯುವ ಮೂಲಕ ಉಜ್ವಲ ಭವಿಷ್ಯವನ್ನು ರೂಪಿಸಿಕೊಳ್ಳಬೇಕು ಎಂದು ಅವರು ಮಕ್ಕಳಿಗೆ ಸಲಹೆ ನೀಡಿದರು.


# ಕುಡಿಯುವ ನೀರಿನ ಸಮಸ್ಯೆಯಾಗದಂತೆ ಮುಂಜಾಗ್ರತೆ ವಹಿಸಲು ಸೂಚನೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಬೇಸಿಗೆ ಆರಂಭವಾಗುತ್ತಿದ್ದು, ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಯಾವುದೇ ಸಮಸ್ಯೆಯಾಗದಂತೆ ಮುಂಜಾಗ್ರತಾ ಅಗತ್ಯ ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ಸೂಚಿಸಿದರು.

ಜಿಲ್ಲಾಧಿಕಾರಿ ಕಚೇರಿಯಲ್ಲಿ ಗುರುವಾರ ಎಲ್ಲಾ ತಹಶೀಲ್ದಾರ್‌ಗಳೊಂದಿಗೆ ವೀಡಿಯೋ ಸಂವಾದ ಮೂಲಕ ಕುಡಿಯುವ ನೀರು ಸೇರಿ ಇತರೆ ವಿಷಯಗಳ ಕುರಿತು ಸಭೆಯಲ್ಲಿ ಮಾತನಾಡಿದರು.

ತಹಸೀಲ್ದಾರ್‌ಗಳ ಅಧ್ಯಕ್ಷತೆಯಲ್ಲಿ ತಾಲೂಕು ಮಟ್ಟದಲ್ಲಿ ಸಭೆ ನಡೆಸಿ ಕುಡಿಯುವ ನೀರಿನ ಸಮಸ್ಯೆ ಎದುರಾಗಬಹುದಾದ ಗ್ರಾಮಗಳನ್ನು ಮೊದಲೇ ಗುರುತಿಸಿರಬೇಕು. ಗ್ರಾಮ



ಪಂಚಾಯಿತಿಯ ಆಡಳಿತಾಧಿಕಾರಿ ಹಾಗೂ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳ ಸಭೆ ನಡೆಸಿ ಸಿದ್ಧತೆ ಕೈಗೊಳ್ಳಬೇಕು ಎಂದು ಅಧಿಕಾರಿಗಳು ನಿರ್ದೇಶನ ನೀಡಿದರು.

ಜಾನುವಾರುಗಳಿಗೆ ಮೇವಿನ ಕೊರತೆ ಹಾಗೂ ನೀರಿನ ಕೊರತೆಯಾಗಬಾರದು. ಜಾನುವಾರುಗಳಿಗೆ ಮೇವಿನ ಅಗತ್ಯತೆಯನ್ನು ಈಗಲೇ ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು. ಹಿಂದಿನ ವರ್ಷ ಬೇಸಿಗೆಯಲ್ಲಿ ಆದಂತಹ ಸಮಸ್ಯೆಗಳು ಮತ್ತೆ ಮರುಕಳಿಸದಂತೆ ಕ್ರಮವಹಿಸಲು ಸೂಚಿಸಿದರು. ಕುಡಿಯುವ ನೀರಿನ ಸಮಸ್ಯೆಗೆ ಸಹಾಯವಾಣಿ ಪ್ರಾರಂಭ ಮಾಡಬೇಕು, ಸಹಾಯವಾಣಿ ಕಾರ್ಯ ನಿರ್ವಹಿಸಬೇಕು ಹಾಗೂ ಸಹಾಯವಾಣಿಯ ಬಗ್ಗೆ ಹೆಚ್ಚಿನ ಪ್ರಚಾರ ನೀಡಬೇಕು, ಕುಡಿಯುವ ನೀರಿನ ಸಮಸ್ಯೆ ಎದುರಾದಲ್ಲಿ ಬಗೆಹರಿಸಲು ಮಾಡಿಕೊಂಡಿರುವ ಸಿದ್ಧತೆಯ ವರದಿಯನ್ನು ಕೂಡಲೇ ಸಲ್ಲಿಸಬೇಕು ಎಂದು ತಿಳಿಸಿದರು.

ಭೂ ಸುರಕ್ಷಾ ಯೋಜನೆಯಡಿ ದಾಖಲೆಗಳ ಡಿಜಿಟಲೀಕರಣ ನಿಗದಿತ ಸಮಯದಲ್ಲಿ ಪೂರ್ಣಗೊಳಿಸಬೇಕು. ಹಕ್ಕು ಪತ್ರ ವಿತರಣೆ ಅಗತ್ಯ ಕ್ರಮವಹಿಸಬೇಕು. ಜಿಲ್ಲೆಯಲ್ಲಿ ಬಾಕಿ ಇರುವ ಜಾಮೀನು ದುರಸ್ತಿ ಮಾಡಬೇಕು ಕನಿಷ್ಟ ಎರಡು ದಾಖಲೆಗಳಿದ್ದರೆ ದುರಸ್ತಿಗೆ ಕ್ರಮವಹಿಸಬೇಕು ದಾಖಲೆಗಳನ್ನು ಇಲ್ಲದಿದ್ದರೆ ಸಮಯ ವ್ಯರ್ಥ ಮಾಡದೆ ಮಿಸ್ಸಿಂಗ್ ಕಮಿಟಿಯಲ್ಲಿ ಇಟ್ಟು ಅನುಮೋದನೆ ಪಡೆದು ದುರಸ್ತಿ ಮಾಡಬೇಕು.

ಈಗಾಗಲೇ ಪೌತಿ ಖಾತೆ ಆಂದೋಲನ ನಡೆಯುತ್ತಿದ್ದು ನಿಗದಿತ ಗುರಿ ಸಾಧಿಸಬೇಕು ಹಾಗೂ ಸರ್ಕಾರಿ ಕೆರೆ ಒತ್ತುವರಿ ತೆರವು ಕಾರ್ಯ ಶೇ. 100 ರಷ್ಟು ಆಗಬೇಕು, ತಹಶೀಲ್ದಾರ್ ಹಾಗೂ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದಲ್ಲಿ ಪ್ರಕರಣ ವಿಲೇವಾರಿಯಾಗಬೇಕು ಎಂದು ತಿಳಿಸಿದರು.

# ಇಂದು ಮೂರು ಪುಸ್ತಕಗಳ ಬಿಡುಗಡೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಎಂ.ಜಿ. ರಸ್ತೆಯಲ್ಲಿರುವ ಗಾಂಧಿ ಭವನದಲ್ಲಿ ಮೂರು ಪುಸ್ತಕಗಳ ಬಿಡುಗಡೆ ಸಮಾರಂಭ ಹಮ್ಮಿಕೊಳ್ಳಲಾಗಿದೆ.

ಭಾನುವಾರ ಮಧ್ಯಾಹ್ನ 1.30ಕ್ಕೆ ಕಾರ್ಯಕ್ರಮ ಆರಂಭವಾಗಲಿದ್ದು, ಪತ್ರಕರ್ತ ಉದಯ ರವಿ ಅವರ ಹಾಸನ ಜಿಲ್ಲಾ ವೈಶಿಷ್ಟ್ಯ ಕೃತಿಯನ್ನು ಕನ್ನಡ ಪ್ರಾಧ್ಯಾಪಕ ಡಾ.ಜಯಶಂಕರ ಹಲಗೂರು, ಕೃಷ್ಣ ಹಾನುಬಾಳು ರಚಿತ ಏಳು ಬೀಳಿನ ಹಾದಿಯಲ್ಲಿ ಪುಸ್ತಕವನ್ನು ಸಾಹಿತಿ ಡಾ. ರಾಮಲಿಂಗೇಶ್ವರ ಹಾಗು ಜಯಂತಿ ಚಂದ್ರಶೇಖರ್ ಅವರ ನಿರ್ಲಿಪ್ತ ಕಾದಂಬರಿಯನ್ನು ಪತ್ರಕರ್ತ ಕೆ.ಆರ್.ನೀಲಕಂಠ ಬಿಡುಗಡೆ ಮಾಡಲಿದ್ದಾರೆ.

ಹಿರಿಯ ಸಾಹಿತಿ ಡಿ.ಕಾಳೇಗೌಡ ನಾಗಾವರ ಕಾರ್ಯಕ್ರಮ ಉದ್ಘಾಟಿಸುವರು. ಕನ್ನಡ ಸಾಹಿತ್ಯ ಪರಿಷತ್ ಮಾಜಿ ಅಧ್ಯಕ್ಷ ಹಾಗೂ ಪತ್ರಕರ್ತ ಉದಯರವಿ ಪ್ರಸ್ತಾವಿಕ ಭಾಷಣ ಮಾಡಲಿದ್ದಾರೆ. ಜಾನಪದ ವಿದ್ವಾಂಶ ಚಂದ್ರು ಕಾಳೇನಹಳ್ಳಿ ಅಧ್ಯಕ್ಷತೆ ವಹಿಸಲಿದ್ದು, ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು, ಉಪಾಧ್ಯಕ್ಷ ಹೆಚ್.ಬಿ.ಮದನಗೌಡ, ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ ಉಪಸ್ಥಿತಿ ವಹಿಸುವರು. ಮುಖ್ಯ ಅತಿಥಿಗಳಾಗಿ ಹಿಮ್ಸ್ ಪ್ರಾಂಶುಪಾಲ ಡಾ. ಬಿ.ಸಿ.ರವಿಕುಮಾರ್, ನಿರಂತರ ಪ್ರಕಾಶನದ ಪ್ರವೀಣ್ ಜಗಾಟ ಪಾಲ್ಗೊಳ್ಳಲಿದ್ದಾರೆ.

# ಸರ್ವಜ್ಞನ ವಚನಗಳು ವ್ಯಕ್ತಿತ್ವ ವಿಕಸನಕ್ಕೆ ಸಹಕಾರಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಸರ್ವಜ್ಞ ಕವಿಯು ಮೂರು ಸಾಲಿನ ತ್ರಿಪದಿಗಳಲ್ಲಿ ಜೀವನ ಸಂದೇಶ, ವ್ಯಕ್ತಿತ್ವ ವಿಕಸನ ಬದುಕಿನ ಮೌಲ್ಯ ಹಾಗೂ ಸಮಾಜದ ಆಗುಹೋಗುಗಳನ್ನು ನಿಸ್ಸಂಕೋಚವಾಗಿ ನಿರ್ಭಯವಾಗಿ ತಿಳಿಸುವ ಕೆಲಸ ಎಂದು ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ ತಿಳಿಸಿದರು.

ನಗರದ ಹಾಸನಾಂಬ ಕಲಾಕ್ಷೇತ್ರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಸಂತ ಕವಿ ಸರ್ವಜ್ಞ ಜಯಂತಿ ಉದ್ಘಾಟಿಸಿ ಮಾತನಾಡಿದರು.

ಒಂದೊಂದು ತ್ರಿಪದಿಗಳು ಹಲವಾರು ರೀತಿಯ ಅಧ್ಯಯನವನ್ನೇ ಮಾಡುವಂತಹ ಮೌಲ್ಯಯುತ ತ್ರಿಪದಿಯ ವಚನಗಳನ್ನು ಸಮಾಜಕ್ಕೆ ನೀಡುವ ಮೂಲಕ ಸಮಾಜದಲ್ಲಿ ಇರುವಂತಹ ಜಾತಿ ವ್ಯವಸ್ಥೆ ಹೋಗಲಾಡಿಸುವಿಕೆ ಹಾಗೂ ಸಮಾಜದ ಅಂಕುಡೊಂಕುಗಳ ಬಗ್ಗೆ ತಿಳಿಸಿಕೊಟ್ಟಿದ್ದಾರೆ ಎಂದರು. ಸಮಾಜಕ್ಕೆ ಕೇವಲ ತತ್ವಜ್ಞಾನಿ



ಮಾತ್ರವಲ್ಲ ಮನಶಾಸ್ತ್ರಜ್ಞರ ಪಾತ್ರವು ತುಂಬಾ ಅವಶ್ಯಕವಾಗಿದೆ. ಅವರ ಜೀವನವು ಇತರರಿಗೆ ಮಾದರಿಯಾಗಿದೆ. ಬಡತನ, ಜಾತಿ ವ್ಯವಸ್ಥೆ ಕುರಿತು ಎಲ್ಲವನ್ನು ತ್ರಿಪದಿಗಳ ಮೂಲಕ ತಿಳಿಸುತ್ತ ಸಮಾಜದಲ್ಲಿ ಸಮಾನತೆ ನಿರ್ಮಾಣ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದರು ಎಂದು ಹೇಳಿದರು.

ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಎಚ್.ಎಲ್.ಮಲ್ಲೇಶ್ ಗೌಡ ಮಾತನಾಡಿ, ತನಗೆ ಏನೂ ಗೊತ್ತಿಲ್ಲ ಎಂಬುವವನೇ ಜಗತ್ತಿನ ಸರ್ವಶ್ರೇಷ್ಠ ಜ್ಞಾನಿ. ತನಗೆ ಎಲ್ಲವೂ ಗೊತ್ತು ಎಂದು ಹೇಳುವವನೇ ಜಗತ್ತಿನ ಸರ್ವ ಶ್ರೇಷ್ಠ ಅಜ್ಞಾನಿ ಎಂದು ಹೇಳಿದರು.

ಸಾಮಾನ್ಯ ಜ್ಞಾನ ಪ್ರತಿಯೊಬ್ಬರಲ್ಲಿಯೂ ಇರಬೇಕು. ಸರ್ವಜ್ಞ ಎಂಬ ಸಣ್ಣ ಗರ್ವ ಇದ್ದರು ಸಹ ಜ್ಞಾನಿಯಾಗಲು ಸಾಧ್ಯವಿಲ್ಲ. ನಾವೆಲ್ಲರೂ ಸೇರಿ ಸರ್ವಜ್ಞ ಎಂದು ಒಪ್ಪಿಕೊಂಡು ಇರುವುದು ಸರ್ವರೊಳಗೊಂದುಂದು ನುಡಿ ಕಲಿತು ವಿದ್ಯೆದ ಪರ್ವತ ನೀನಾಗು ಎಂದರು.

ವಿದ್ಯೆ ಎಂಬುದು ಕೇವಲ ಜ್ಞಾನಿಗಳ ಸ್ವತ್ತಲ್ಲ ಪ್ರತಿಯೊಬ್ಬರು ವಿದ್ಯೆ ಕಲಿಯಲು ಅರ್ಹರು ಎಂದರಲ್ಲದೆ ವಿದ್ಯೆ ಎಂಬುವುದು ಅಕ್ಷರ ರೂಪದಲ್ಲಿ ಮಾತ್ರವಲ್ಲದೆ ತಿಳವಳಿಕೆ, ಅನುಭವವು ಕೂಡ ಒಂದು ರೀತಿಯ ವಿದ್ಯೆಯಾಗಿದೆ ಎಂದು ತಿಳಿಸಿದರು.

ಹೆಬ್ಬಾಲೆ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಮುಖ್ಯ ಶಿಕ್ಷಕ ಬಿ.ಡಿ. ಶಂಕರೇಗೌಡ ಮಾತನಾಡಿ, ಯಾವುದೇ ಒಂದು ವ್ಯಕ್ತಿ ಸಮಾಜವನ್ನು ದಾರ್ಶನಿಕವಾಗಿ ಬೆಳೆಯಬೇಕೆಂದರೆ ಸರ್ವಜ್ಞನ ಕುರಿತು ಅಧ್ಯಯನ ಮಾಡುವುದು ಅತ್ಯಗತ್ಯ ಎಂದು ತಿಳಿಸಿದರು.

ಸರ್ವಜ್ಞನ ಸಾಹಿತ್ಯಗಳು ಎಂದಾಕ್ಷಣ ನಮಗೆ ನೆನಪಾಗುವುದು ತ್ರಿಪದಿ, ಬದುಕಿನ ಸಾರವನ್ನೇ ತಿಳಿಸುವ ವಚನ ಸಾಹಿತ್ಯವನ್ನು ಸರ್ವಜ್ಞರು ಸಮಾಜಕ್ಕೆ ಕೊಡುಗೆಯಾಗಿ ಸರ್ವಜ್ಞನು ವಚನಗಳ ಮೂಲಕ ಜಾತಿ ನಿಂದನೆ, ವರ್ಗ ಸಂಘರ್ಷ, ಧಾರ್ಮಿಕ ಸಂಘರ್ಷಗಳ ಬಗ್ಗೆ ಸಮಾಜವನ್ನು ಎಚ್ಚರಿಸುತ್ತ ಬಂದರು.

ಜಿಲ್ಲಾ ಪಂಚಾಯಿತಿ ಉಪ ಕಾರ್ಯದರ್ಶಿ ಬಾಬು, ಕನ್ನಡ ಸಂಸ್ಕೃತ ಇಲಾಖೆ ಸಹಾಯಕ ನಿರ್ದೇಶಕ ಹೆಚ್.ಪಿ.ತಾರಾನಾಥ್ ಇತರರಿದ್ದರು.

# ಬೊಮ್ಮಲಿಂಗೇಶ್ವರ ದೇವಸ್ಥಾನದಲ್ಲಿ ಹುಂಡಿ ಕಳವು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ತಾಲೂಕಿನ ಕಣಕಟ್ಟೆ ಹೋಬಳಿಯ ಬೊಮ್ಮಸಮುದ್ರ ಗ್ರಾಮದ ಹೊರವಲಯದಲ್ಲಿರುವ ಬೊಮ್ಮಲಿಂಗೇಶ್ವರ ಸ್ವಾಮಿ ದೇವಾಲಯದಲ್ಲಿ ಸರಣಿ ಕಳ್ಳತನ ನಡೆದಿದೆ. ಗ್ರಾಮದ ಹೊರವಲಯದ ಕೆರೆ ಏರಿಯ ಮೇಲಿರುವ ಈ ದೇವಾಲಯದಲ್ಲಿ ಎಂದಿನಂತೆ ಅರ್ಚಕರು ಪೂಜೆ ಮುಗಿಸಿ ಮನೆಗೆ ತೆರಳಿದ್ದರು. ಶುಕ್ರವಾರ ಮುಂಜಾನೆ ಪೂಜೆಗೆ ಬಂದಾಗ ದೇವಾಲಯದ ಮುಖ್ಯ ಬಾಗಿಲಿನ ಬೀಗ ಒಡೆದು ಕಳ್ಳರು ಒಳನುಗ್ಗಿರುವುದು ಬೆಳಕಿಗೆ ಬಂದಿದೆ. ಖದೀಮರು ದೇವಾಲಯ ಆವರಣದಲ್ಲಿದ್ದ ಹುಂಡಿಯ ಬೀಗ ಒಡೆದು ಅದರಲ್ಲಿದ್ದ ನಗದು ದೋಚಿದ್ದಾರೆ. ಅಲ್ಲದೆ, ಗರ್ಭಗುಡಿಯಲ್ಲಿದ್ದ ಬೊಮ್ಮಲಿಂಗೇಶ್ವರ ಸ್ವಾಮಿಗೆ ಹಾಕಿದ್ದ ಲಕ್ಷಾಂತರ ರೂ. ಮೌಲ್ಯದ ಬೆಳ್ಳಿ ಆಭರಣಗಳನ್ನು ಕಳವು ಮಾಡಿದ್ದಾರೆ.

ತಾಲ್ಲೂಕಿನಲ್ಲಿ ಇತ್ತೀಚೆಗೆ ದೇವಾಲಯಗಳನ್ನು ಗುರಿಯಾಗಿಸಿಕೊಂಡು ನಡೆಯುತ್ತಿರುವ ಸರಣಿ ಕಳ್ಳತನ ಪ್ರಕರಣಗಳು ಭಕ್ತರಲ್ಲಿ ಆತಂಕವನ್ನುಂಟು ಮಾಡಿವೆ. ಹಲವು ದಿನಗಳ ಹಿಂದೆ ಕಳ್ಳತನ ಪ್ರಕರಣ ಬೆಳಿಗೆ ಬಂದಿತ್ತು. ಆರೋಪಿಗಳನ್ನು ಶೀಘ್ರ ಪತ್ತೆಹಚ್ಚುವಂತೆ ಸ್ಥಳೀಯರು ಆಗ್ರಹಿಸಿದ್ದಾರೆ. ಈ ಸಂಬಂಧ ಬಾಣಾವರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಇತಿಹಾಸದಲ್ಲಿ ಈ ದಿನ

## ಫೆಬ್ರವರಿ-22

**1632:** ವಿಜ್ಞಾನಿ ಗ್ಯಾಲಿಲಿಯೋ ಗ್ಯಾಲಿಲಿ ಅವರ ಖ್ಯಾತ ಕೃತಿ Dialogue Concerning the Two Chief World Systems ಪ್ರಕಟವಾಯಿತು.

**1944:** ದ್ವಿತೀಯ ವಿಶ್ವಯುದ್ಧದ ಸಮಯದಲ್ಲಿ ಅಮೆರಿಕನ್ ಪಡೆಗಳು ಮಾರ್ಷಲ್ ದ್ವೀಪಗಳು ಪ್ರದೇಶವನ್ನು ಜಪಾನ್‌ನಿಂದ ವಶಪಡಿಸಿಕೊಂಡವು.

**1944:** ದ್ವಿತೀಯ ವಿಶ್ವಯುದ್ಧದ ವೇಳೆ ಅಮೆರಿಕನ್ ಪಡೆಗಳು ಮಾರ್ಷಲ್ ದ್ವೀಪಗಳು ಪ್ರದೇಶವನ್ನು ಜಪಾನ್‌ನಿಂದ ವಶಪಡಿಸಿಕೊಂಡವು.

**1994:** ಕನ್ನಡದ ಹೆಮ್ಮೆಯ ನಟ ಡಾ. ರಾಜ್‌ಕುಮಾರ್ ಅವರಿಗೆ ಭಾರತದ ಅತ್ಯುನ್ನತ ಚಲನಚಿತ್ರ ಗೌರವವಾದ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಘೋಷಿಸಲಾಯಿತು.

### ಜನನ

**1732:** ಅಮೆರಿಕದ ಮೊದಲ ಅಧ್ಯಕ್ಷ ಜಾರ್ಜ್ ವಾಷಿಂಗ್ಟನ್

**1879:** ಸ್ವಾತಂತ್ರ್ಯ ಹೋರಾಟಗಾರ್ತಿ ಕಸ್ತೂರಬಾ ಗಾಂಧಿ


**1885:** ಕ್ರಾಂತಿಕಾರಿ ಚಿಂತಕ ವಿನಾಯಕ ದಾಮೋದರ ಸಾವರ್ಕರ್

# ಎತ್ತಿನಹೊಳೆ ಯೋಜನೆಯಿಂದ 200 ಕೋಟಿ ರೂ.

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಸೀಕೆರೆ: ಎತ್ತಿನಹೊಳೆ ಕಾಮಗಾರಿಯನ್ನು ತಾಲೂಕಿನಲ್ಲಿ ಮತ್ತಷ್ಟು ಚುರುಕುಗೊಳಿಸುವ ಉದ್ದೇಶದಿಂದ 200 ಕೋಟಿ ರೂ. ಅನುದಾನವನ್ನು ರಾಜ್ಯ ಸರ್ಕಾರ ಬಿಡುಗಡೆ ಮಾಡಿದೆ ಎಂದು ಶಾಸಕ ಕೆ.ಎಂ. ಶಿವಲಿಂಗೇಗೌಡ ತಿಳಿಸಿದರು.

ತಾಲೂಕಿನ ಬೋರನಕೊಪ್ಪಲು ಗ್ರಾಮದಿಂದ ಮಾಕನಹಳ್ಳಿ ಗ್ರಾಮಕ್ಕೆ ಸಂಪರ್ಕಿಸುವ 1 ಕೋಟಿ ರೂ. ವೆಚ್ಚದ ರಸ್ತೆ ಕಾಮಗಾರಿಗೆ ಶನಿವಾರ ಭೂಮಿಪೂಜೆ ನೆರವೇರಿಸಿ ಮಾತನಾಡಿ, ಅರಸೀಕೆರೆ ಸೇರಿ ಮಧ್ಯ ಕರ್ನಾಟಕದ ಬಯಲು ಸೀಮೆಗೆ ಎತ್ತಿನಹೊಳೆ ಯೋಜನೆ ವರದಾನವಾಗಿದೆ. ಕೆಲವೇ ದಿನಗಳಲ್ಲಿ ತಾಲ್ಲೂಕಿನ ಕೆರೆಕಟ್ಟೆಗಳಲ್ಲಿ ನೇತ್ರಾವತಿ ನೀರು ತುಂಬಿ ತುಳುಕಲಿದೆಯೆಂದು ವಿಶ್ವಾಸ ವ್ಯಕ್ತಪಡಿಸಿದರು. ರಾಜ್ಯದ ಪವಿತ್ರ ಧಾರ್ಮಿಕ ಯಾತ್ರಾ ಸ್ಥಳಗಳಲ್ಲಿ



ಒಂದಾಗಿರುವ ಯಾದಾಪುರದ ಜೇನುಕಲ್ ಸಿದ್ದೇಶ್ವರ ಸ್ವಾಮಿ ಕ್ಷೇತ್ರಕ್ಕೆ ಹೊಂದಿಕೊಂಡಂತಿರುವ ಬೋರನ ಕೊಪ್ಪಲು, ಹಾರನಹಳ್ಳಿ, ಮುರುಂಡಿ, ಸಂಕೋಡನಹಳ್ಳಿ ಸೇರಿ ಸುತ್ತಮುತ್ತಲ ಗ್ರಾಮದ ಜನರು ಕ್ಷೇತ್ರಕ್ಕೆ ಭೇಟಿ ನೀಡಲು ಅನುಕೂಲವಾಗುವಂತೆ ರಸ್ತೆ ನಿರ್ಮಿಸಲಾಗಿದೆ ಎಂದು ತಿಳಿಸಿದರು.

ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಗೀಜಿಹಳ್ಳಿ ಧರ್ಮಶೇಖರ್ ಮಾತನಾಡಿ, ಕ್ಷೇತ್ರದ ಜನರ ಕುಡಿಯುವ ನೀರಿನ ಬವಣೆ ತಪ್ಪಿಸಲು ಶಾಸಕ ಕೆ.ಎಂ.ಶಿವಲಿಂಗೇಗೌಡ ಸಾಕಷ್ಟು ಶ್ರಮಿಸಿದ್ದಾರೆ. ಜನರ ಬೇಕು ಬೇಡಗಳಿಗೆ ಸ್ಪಂದಿಸುತ್ತಾ ಬಂದಿರುವ ಅವರಿಗೆ ನಾವೆಲ್ಲರೂ ಬೆಂಬಲವಾಗಿ ನಿಲ್ಲಬೇಕಿದೆ ಎಂದರು.

ರೈತ ಸಂಘದ ಮುಖಂಡ ಬೋರನಕೊಪ್ಪಲು ಶಿವಲಿಂಗಪ್ಪ ಮಾತನಾಡಿದರು. ಗಿಜೀಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಧರ್ಮೇಶ್, ನಾಗರಾಜ್, ಬೈರೇಶ್, ಮುಖಂಡರಾದ ಯಳವಾರೆ ಕೇಶವಣ್ಣ, ಬೋರನ ಕೊಪ್ಪಲು ಸ್ವಾಮಣ್ಣ, ರವಿ, ವೈ.ಕೆ.ದೇವರಾಜ್, ಗುತ್ತಿಗೆದಾರ ಜ್ಞಾನೇಶ್ ಇತರರು ಉಪಸ್ಥಿತರಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248